# ಕರ್ನಾಟಕ ವಿಧಾನಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : | 50(26) |
| ಸದಸ್ಯರ ಹೆಸರು : | ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ : | 13-02-2024 |
| ಉತ್ತರಿಸುವವರು : | ಪೌರಾಡಳಿತ ಮತ್ತು ಹಜ್ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ದಕ್ಷಿಣ ಕನ್ನಡ ಜಿಲ್ಲೆ ಬೆಳ್ತಂಗಡಿ ಪಟ್ಟಣ ಪಂಚಾಯತಿ ವ್ಯಾಪ್ತಿಯಲ್ಲಿ ನಗರಪ್ರಾಧಿಕಾರದ ಮಹಾಯೋಜನೆಯನ್ನು ಜಾರಿಗೆ ತರುವ ಪ್ರಸ್ತಾವನೆಯಿಂದಾಗಿ 2017ರ ಪೂರ್ವದ ಭೂಪರಿವರ್ತಿತ ಹಾಗೂ ನಮೂನೆ-3ರಂತೆ ಗುರುತಿಸಿರುವ ನಿವೇಶನಗಳನ್ನು ಹೊಂದಿರುವ ಖಾತೆದಾರರಿಗೆ ಹೊಸ ಮನೆ ನಿರ್ಮಾಣಕ್ಕಾಗಿ ಕಟ್ಟಡಪರವಾನಗಿ ದೊರೆಯದೆ ಮತ್ತು ಈಗಾಗಲೇ ವಾಸವಿರುವ ಮನೆಗಳ ನವೀಕರಣ ಅಥವಾ ವಿಸ್ತರಣೆಗೆ ಕೂಡ ಪರವಾನಗಿ ದೊರೆಯದೆ ಸಾರ್ವಜನಿಕರಿಗೆ ತೀವ್ರತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಹೌದು, ಸರ್ಕಾರದ ಗಮನಕ್ಕೆ ಬಂದಿರುತ್ತದೆ |
| ಆ) | ಬೆಳ್ತಂಗಡಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ವಿಶೇಷ ಪ್ರಕರಣವೆಂದು ಪರಿಗಣಿಸಿ 2017ರ ಪೂರ್ವದಲ್ಲಿ ಕೃಷಿಯೇತರ ಉದ್ದೇಶಕ್ಕಾಗಿ ಭೂಪರಿವರ್ತಿತ ಆಸ್ತಿಗಳನ್ನು ಹೊಂದಿರುವವರಿಗೆ ಮಹಾಯೋಜನೆಯ ನಿಯಮಗಳನ್ನುಅನ್ವಯಿಸದೆ ಈ ಹಿಂದಿನಂತೆ ನಿವೇಶನಗಳ ವಿನ್ಯಾಸ ನಕ್ಷೆಯನ್ನು ಅನುಮೋದಿಸಿ, ಅಧಿಕೃತ ನಿವೇಶನಗಳೆಂದು ಪರಿಗಣಿಸಿ, ಕಟ್ಟಡ ನಿರ್ಮಾಣಕ್ಕೆ ಅಗತ್ಯವಿರುವ ಕಟ್ಟಡಪರವಾನಗಿಯನ್ನು ನೀಡಲು ಸರ್ಕಾರ ಇದುವರೆವಿಗೂ ಕ್ರಮವಹಿಸದಿರಲು ಕಾರಣಗಳೇನು; | ದಕ್ಷಿಣ ಕನ್ನಡ ಜಿಲ್ಲೆ ಬೆಳ್ತಂಗಡಿ ಪಟ್ಟಣ ಪಂಚಾಯತಿ ವ್ಯಾಪ್ತಿಯ ನಗರ ಪ್ರಾಧಿಕಾರದ ಮಹಾಯೋಜನೆ ಕರಡು ಪ್ರತಿಯನ್ನು ಅನುಮೋದನೆಗಾಗಿ ಸರ್ಕಾರಕ್ಕೆ ಸಲ್ಲಿಸುವ ಹಂತದಲ್ಲಿದ್ದು. ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ 7 ಟಿಟಿಪಿ 2017 ದಿನಾಂಕ 22-03-2017ರಲ್ಲಿ ಸಕ್ಷಮ ಪ್ರಾಧಿಕಾರಗಳಿಂದ (ನಗರ ಮತ್ತು ಗ್ರಾಮಾಂತರ ಯೋಜನಾ ಪ್ರಾಧಿಕಾರ, ಮಂಗಳೂರು) ವಿನ್ಯಾಸ ಅನುಮೋದನೆ ಪಡೆಯದೆ ಇರುವ ನಿವೇಶನಗಳಿಗೆ ಖಾತೆಯನ್ನು ನೀಡಬಾರದೆಂದು ಸೂಚನೆ ಇರುವುದರಿಂದ ಸಕ್ಷಮ ಪ್ರಾಧಿಕಾರಗಳಿಂದ (ನಗರ ಮತ್ತು ಗ್ರಾಮಾಂತರ ಯೋಜನಾ ಪ್ರಾಧಿಕಾರ ಮಂಗಳೂರು) ಅನುಮೋದನೆ ಪಡೆದಿರುವ ಖಾತೆಗಳಿಗೆ ನಮೂನೆ-3 ಮತ್ತು ಕಟ್ಟಡ ಪರವಾನಿಗೆ ನೀಡಲಾಗುತ್ತಿದೆ.<br><br>ಅಕ್ರಮ-ಸಕ್ರಮ ಯೋಜನೆಗೆ ಸಂಬಂಧಿಸಿದಂತೆ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಪ್ರಕರಣ ಸಂಖ್ಯೆ: ಸಿ.ಎ.ನಂ.767-768/2017ರಲ್ಲಿ ದಾಖಲಾಗಿ ಚಾಲ್ತಿಯಿರುವುದರಿಂದ ಯಾವುದೇ ಕ್ರಮ ತೆಗೆದುಕೊಳ್ಳಲು ಸಾಧ್ಯವಾಗಿರುವುದಿಲ್ಲ. |
| ಇ) | ಹಾಗಿದ್ದಲ್ಲಿ ಯಾವ ಕಾಲಮಿತಿಯೊಳಗೆ ಸದರಿ ಸಮಸ್ಯೆಯನ್ನು ಪರಿಹರಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಲಾಗುವುದು? | ಅಕ್ರಮ ಸಕ್ರಮ ಯೋಜನೆಯನ್ನು ಜಾರಿಗೊಳಿಸಬೇಕಾಗಿರುವುದರಿಂದ. ಈ ಸಂಬಂಧ ಮಾನ್ಯ ಸರ್ವೋಚ್ಚ ನ್ಯಾಯಲಯದಲ್ಲಿ ಪ್ರಕರಣ ಬಾಕಿಯಿರುತ್ತದೆ. ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮುಂದಿನ ಆದೇಶದಂತೆ ನಿಯಮಾನುಸಾರ ಅಗತ್ಯ ಕ್ರಮವಹಿಸಲಾಗುವುದು. |

ಇ-ಸಂಖ್ಯೆ: ನಅಇ 33 ಜಿಇಎಲ್ 2024(ಇ)

(ರಹೀಂಖಾನ್)
ಪೌರಾಡಳಿತ ಮತ್ತು ಹಜ್ ಸಚಿವರು